ಚದರದ ಫ್ಲ್ಯಾಟಿಗೆ ಸಂಸಾರ ತಂದು ನೆಲೆಗೊಳಿಸಿ ಮಿಹಿರ ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದ. ಹಳ್ಳಿಯಲ್ಲಿ ವಿಶಾಲವಾದ ಮನೆಯಲ್ಲಿ ಹಕ್ಕಿಗಳಂತಿದ್ದ ಅಪ್ಪ ಅಮ್ಮನನ್ನು ಇಲ್ಲಿ ತಂದು ಕಟ್ಟಿ ಹಾಕಿಬಿಟ್ಟೆನೇನೋ ಎನ್ನುವ ಭಾವ ಆಗಾಗ ಕಾಡುತ್ತಿದ್ದರೂ ಅವರಿಬ್ಬರೂ ಅಪಾರ್ಟ್‌ಮೆಂಟಿನ ತಮ್ಮದೇ ವಯೋಮಾನದವರ ಜೊತೆ ವಾಕಿಂಗ್, ದೇವಸ್ಥಾನ ಅದೂ ಇದೂ ಎಂದು ಸುಲಭವಾಗಿ ತೊಡಗಿಸಿಕೊಂಡಿದ್ದು ನೋಡಿ ಸಮಾಧಾನವಾಗಿತ್ತು. ಈಗ ಇಲ್ಲಿಗೆ ಬಂದ ವರ್ಷಕ್ಕೇ ಅಪ್ಪ ಹೀಗೆ ಕೈಕೊಟ್ಟು ಹೋಗಬೇಕೆ? ಜೊತೆಗೆ ಅಪ್ಪನನ್ನ ಮನೆಗೂ ಕರೆ ತರೋಹಾಗಿಲ್ಲ ಅಂದರೆ?

ಎರಡು ತಿಂಗಳ ಹಿಂದಷ್ಟೇ ಪಕ್ಕದ ಬ್ಲಾಕಿನ ರಾಮಮೂರ್ತಿಗಳು ತೀರಿಕೊಂಡ ಸಂದರ್ಭ ನೆನಪಾಯಿತು ಮಿಹಿರನಿಗೆ. ಹೆಚ್ಚಿನ ಸದ್ದು ಗದ್ದಲಕ್ಕೂ ಅವಕಾಶ ಕೊಡದೆ ಒಂದು ಗಂಟೆಯೊಳಗೆ ಎಲ್ಲಾ ವಿಧಿ ವಿಧಾನ ತೀರಿಸಿ ಚಟ್ಟ ಎತ್ತಿಯೇ ಬಿಟ್ಟಿದ್ದರಲ್ಲ. ಅಂದು ಭಾನುವಾರ ಬೇರೆ. ವಾರವಿಡೀ ದುಡಿದ ಜನ ನಿದ್ದೆಯಿಂದ ಎದ್ದು ಚುರುಕಾಗುವುದರಲ್ಲಿ ಎಲ್ಲಾ ಮುಗಿದೇಹೋಗಿತ್ತು. ‘ಅಯ್ಯೋ, ಹೌದಾ’ ಎಂದು ಕಣ್ಣು ಬಾಯಿ ಅಗಲಿಸಿದ್ದರಷ್ಟೆ . ರಾಮಮೂರ್ತಿಗಳ ಅಧ್ಯಾಯ ಮುಗಿದೇ ಹೋಗಿತ್ತು. ಆಗೆಲ್ಲ ಅಪಾರ್ಟ್‌ಮೆಂಟಿನ ಹಿರಿಜೀವಗಳಿಗೆಲ್ಲ ಏನೆನಿಸಿರಬಹುದೊ? ಈಗ ಅಪ್ಪನನ್ನ

